

ಮುರ್‌ಗಾಬ್‌ನಿಂದ ಕಾಣುವ ಪಾಮಿರ್ ಶ್ರೇಣಿಗಳ ದೃಶ್ಯ



ಚಿತ್ತಾಕರ್ಷಕ ಪಾಮಿರ್ ಪ್ರಸ್ಥಭೂಮಿ

ಬಚ್ಚನ್, ಶಾರುಕ್ ಖಾನರ ಡೈಲಾಗುಗಳು, ಹಾಡುಗಳನ್ನು ಹಾಡುತ್ತ, ಕುಣಿಯುತ್ತ ತಮ್ಮದೇ ಶೈಲಿಯಲ್ಲಿ ಸಂಭ್ರಮಿಸಿದರು. ದೇಶ, ಗಡಿ, ಜಾತಿ, ಭಾಷೆಗಳ ಮೀರಿ, ಮುಟ್ಟುವ ತಟ್ಟುವ ಈ ಮನುಷ್ಯ ಬಾಂಧವ್ಯದ ಬೆಚ್ಚನೆ ಅನುಭವ ನನ್ನ ಪಯಣದ ಅತೀ ಮುಖ್ಯ ಅನುಭಾವ ಮತ್ತು ಅನುಬಂಧ.

ಖೊರೋಗ್‌ನ ಸುತ್ತಲೂ ಹಬ್ಬಿರುವ ಬಾರ್‌ಟಾಂಗ್, ಶೋಕ್‌ದಾರಾ ಮತ್ತು ವಾಕ್‌ಹಾನ್ ಕಣಿವೆಗಳು ಸಾಹಸಿ ಪ್ರವಾಸಿಗರ ಚಾರಣಕ್ಕೆ ಅತ್ಯಂತ ಪ್ರಶಸ್ತವಾಗಿವೆ.

ಮುಂದೆ ಖೊರೋಗ್‌ನಿಂದ ಸೈಕಲ್ ಹತ್ತಿ, ಗುಂಟ್ ಕಣಿವೆಯ ಎತ್ತರದ ಕಡಿದಾದ ರಸ್ತೆಗಳನ್ನು ಕ್ರಮಿಸುತ್ತ, 4300 ಮೀಟರ್ ಎತ್ತರದ ಕೊಯ್ ತೇಜಕ್ ಕಣಿವೆಯನ್ನು ಹಾಯ್ದು, ಪಾಮಿರ್ ಪ್ರಸ್ಥಭೂಮಿಯನ್ನು ಪ್ರವೇಶಿಸಿದೆ. ಅತಿ ಉನ್ನತವಾದ ಈ ಪ್ರಸ್ಥಭೂಮಿಯನ್ನು ಸುತ್ತುವರಿದ ಹಿಮಚ್ಛಾದಿತ ಪರ್ವತ ಶಿಖರಗಳ ಸೌಂದರ್ಯವನ್ನು ಆಸ್ವಾದಿಸುತ್ತ, ಆಲೀಚೂರ್‌ಯೆಂಬ ಹಳ್ಳಿಯನ್ನು ದಾಟಿ, ಮುರ್‌ಗಾಬ್ ಪಟ್ಟಣವನ್ನು ಸೇರಿದೆ.

ಖೊರೋಗ್‌ನಿಂದ ಮುರ್‌ಗಾಬ್‌ಗಿರುವ 310 ಕಿ.ಮೀ.ನ ದಾರಿಯುದ್ದಕ್ಕೂ ಸಿಗುವ ಹಳೆಯ ಕೋಟೆಗಳು, ಆರ್ಯನ್ ದೇಗುಲಗಳು, ಬಿಸಿ ನೀರಿನ ಬುಗ್ಗೆಗಳು, ಹಲವು ವಿಶಾಲ ಸರೋವರಗಳು, ಪುರಾತನ ಗಣಿಗಳು, ಶಿಥಿಲಗೊಂಡ ಶಿಲಾ ರಚನೆಗಳು, ಚೈನೀಸ್ ಗೋರಿಗಳು ಗತ ಇತಿಹಾಸದ ವಿದ್ಯಮಾನಗಳಿಗೆ ಸಾಕ್ಷಿಯಾಗುತ್ತ ಒಂದು ರೀತಿಯ ನಿಗೂಢ ವಾತಾವರಣ ಸೃಷ್ಟಿಸುತ್ತವೆ.

ಮುರ್‌ಗಾಬ್ ಗುಡ್ಡಗಾಡಿನ ಸಣ್ಣ ಊರು. ಆಧುನಿಕ ನಾಗರಿಕತೆಯ ವಿಜೃಂಭಣೆ ಇಲ್ಲಿಲ್ಲ, ಥಳಥಳಿಸುವ ಜೀವಂತ ಪ್ರಕೃತಿಯೇ ಇಲ್ಲಿಯ ಜೀವಾಳ. ಎರಡು ದಿನ ಇಲ್ಲಿ ಸುಧಾರಿಸಿಕೊಂಡು, ಹೊಸ ಹುರುಪು, ಉತ್ಸಾಹದಿಂದ ಪಾಮಿರ್ ಹೆದ್ದಾರಿಯ ಕೊನೆಯ ಚರಣದ ಚಾರಣಕ್ಕೆ ಸಿದ್ಧನಾದೆ.

## ಸಾರಿತಾಶ್‌ನ ಕಠಿಣ ಹಾದಿ

ಮುರ್‌ಗಾಬ್‌ನಿಂದ ಸಾರಿತಾಶ್‌ವರೆಗಿನ ಪಾಮಿರ್ ಹೆದ್ದಾರಿಯ ಕೊನೆಯ ಭಾಗ ಅತ್ಯಂತ ಕಠಿಣ ಮತ್ತು ಶ್ರಮದಾಯಕ. ಆದರೂ ಅದು ಕೊಡುವ ವಿಶಿಷ್ಟ ಅನುಭೂತಿಗೆ ಸರಿಸಾಟಿಯಿಲ್ಲ. ಆ ಭಾಗದಲ್ಲಿ ಜನ, ವಾಹನ ಸಂಚಾರ ವಿರಳ. ದೃಷ್ಟಿ ಹಾಯುವವರೆಗೆ ಎಲ್ಲಿಯೂ ಪ್ರಾಣಿ ಪಕ್ಷಿಗಳ ಸುಳಿವಿಲ್ಲ. ಎಲ್ಲೆಲ್ಲೂ ನೀರವತೆ, ನಿರ್ಜನತೆ. ಅಲ್ಲಿ ಗಾಳಿ ಸಶಬ್ದದೊಂದಿಗೆ ಸುಳಿದಾಡುವುದಿಲ್ಲ, ಮರಗಳು ಮಾತಾಡುವುದಿಲ್ಲ, ಹಕ್ಕಿಗಳು ಹಾಡುವುದಿಲ್ಲ. ಯಾರದ್ದೇ ಯಾವುದರದ್ದೇ ಸದ್ದಿಲ್ಲ, ಸದ್ದಿದ್ದರೆ ಅದು ತಿರುಗುವ ಸೈಕಲ್ ಚೈನಿನ ಸದ್ದು, ಮರಳ ದಾರಿ ಮೇಲೆ ಉರುಳುವ ಸೈಕಲ್ ಚಕ್ರಗಳ ಸದ್ದು, ಏರುವ ಇಳಿಯುವ ನನ್ನ ಉಸಿರಿನ, ಮಿಡಿಯುವ ಎದೆ ಬಡಿತದ ಸದ್ದು. ನಿಸರ್ಗದ ಅಗಾಧತೆಯ ಎದುರು ಮನುಷ್ಯ ದೇಹ ಎಷ್ಟೊಂದು ಕುಬ್ಜ ಎನಿಸಿದರೂ, ಮನಸ್ಸು ಮಾತ್ರ ಆ ನಿಶ್ಶಬ್ದದಲ್ಲಿ, ಹೆಪ್ಪುಗಟ್ಟಿದ ಮೌನದಲ್ಲಿ ಎಲ್ಲ ಚಿಂತೆ ದುಗುಡಗಳಿಂದ ದೂರವಾಗಿ ಹಗುರವಾಗಿ ನಿರಾಳಗೊಂಡು, ಶಾಂತಿ ನೆಮ್ಮದಿಯ ಒಂದು ಬಗೆಯ ಧ್ಯಾನಸ್ಥ ಸ್ಥಿತಿಗೆ ತೆರೆದುಕೊಳ್ಳುತ್ತದೆ. ಆ ಅಪೂರ್ವ ಅನುಭವವನ್ನು ಹೇಳಲು ಮಾತುಗಳಿಲ್ಲ, ಬರೆಯಲು ಶಬ್ದಗಳಿಲ್ಲ.

ಸುಮಾರು 1 ಕೋಟಿ ವರ್ಷಗಳ ಹಿಂದೆ ಭೂಮಿಗೆ ಬಿದ್ದ ಉಲ್ಕೆಯಿಂದ ರೂಪುಗೊಂಡಿತು ಎಂದು ನಂಬಲಾದ, ವಿಶಾಲವಾದ ಕಾರಾ ಕುಲ್ ಸರೋವರವನ್ನು ದಾಟಿ, ಆ ದಾರಿಯ ಅತ್ಯಂತ ಎತ್ತರದ ಶಿಖರವಾದ ಬೊರೇಡೊವನ್ನು ತಲುಪಿದಾಗ ಆಕಾಶ ಕೈಗೆಟುಕುವಷ್ಟು ದೂರದಲ್ಲೇ ಇದೆ ಅನ್ನಿಸುತ್ತಿತ್ತು. ಆ ಎತ್ತರದಿಂದ ದೂರ ದಿಗಂತದವರೆಗೆ ಹಬ್ಬಿದ ಅಮೋಘ ದೃಶ್ಯಾವಳಿಯನ್ನು ಕಂಡಾಗ, ಪಾಮಿರ್ ಅನ್ನು 'ಜಗತ್ತಿನ ಮೇಲ್ಛಾವಣಿ' ಎಂದು ಏಕೆ ಕರೆಯುತ್ತಾರೆ ಎನ್ನುವುದು ಅರ್ಥವಾಯಿತು.

ಸಾರಿತಾಶ್‌ನಿಂದ ಸೈಕಲ್ ಸಮೇತ, ಸಂಚಾರಿ ಟ್ರಕ್ಕೊಂದನ್ನು ಏರಿ, ಒಂದು ದಿನದ ಪ್ರಯಾಣದ ನಂತರ, ಓಶ್ ನಗರದ ಮೂಲಕ ಹಾದು, ಪಕ್ಕದ ಮಧ್ಯ ಏಷ್ಯಾದ ಇನ್ನೊಂದು ದೇಶವಾದ ಕಿರ್ಗಿಸ್ತಾನದ ರಾಜಧಾನಿ ಬಿಸ್‌ಕೇಕ್ ನಗರವನ್ನು ತಲುಪಿದೆ. ಅಲ್ಲಿಂದ ವಿಮಾನದ ಮೂಲಕ ಬೆಂಗಳೂರಿಗೆ ಮರಳಿದೆ.

ಪ್ರತಿಕ್ರಿಯಿಸಿ: **feedback@sudha.co.in**